ಅಸಲು ದಾವಾ ನಂ:77/2014
ಡಿ.ಡಬ್ಲ್ಯೂ- 01

**<u>ದಿನಾಂಕ:24.08.2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಮುಂದುವರೆದ ಪಾಟೀ ಸವಾಲು: ಶ್ರೀ ಎಂ.ಎಸ್.ಆರ್., ವಾದಿ ಪರ ವಕೀಲರಿಂದ</u>

6. ಪೂಜಾರಿ ಕಾಟಯ್ಯ ನನಗೆ ತಂದೆಯಾಗಬೇಕು. ನನಗೆ ತಂದೆಗೆ ಸೇರಿದ ನಗರಸಭೆಯಲ್ಲಿ ದಾಖಲಾತಿಗಳು ಇರುತ್ತವೆ ಎಂದರೆ ಸರಿ. ನಗರಸಭೆಯಲ್ಲಿ ನನ್ನ ತಂದೆಯ ಹೆಸರಿಗೆ 31 X 15 ಅಡಿ ಆಸ್ತಿಗೆ ಸಂಬಂಧಿಸಿದಂತೆ ಖಾತೆ ಇರುತ್ತದೆ ಎಂದರೆ ಸರಿ. ಉತ್ತರ ದಕ್ಷಿಣ 31 ಅಡಿ ಎಂದರೆ ಸರಿ. ಪೂರ್ವ ಪಶ್ಚಿಮ 15 ಎಂದರೆ ಸರಿ. ನಿ.ಡಿ.6 ರಲ್ಲಿ 16 X 15 ಅಡಿ ಅಂತ ನಮೂದು ಇರುತ್ತದೆ ಎಂದರೆ ಸಾಕ್ಷಿಯು ದಾಖಲೆ ಕೊಟ್ಟಾಗೆ ಇರುತ್ತದೆ ಎಂದು ನುಡಿಯುತ್ತಾರೆ. ನಗರಸಭೆಯ ದಾಖಲಗಳಲ್ಲಿ ನಮೂದು ಆಗಿರುವ ವಿಸ್ತೀರ್ಣ ಮಾತ್ರ ನಾನು ಹಕ್ಕುದಾರರು ಮತ್ತು ಸ್ವಾಧೀನಾದಾರರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುದವರೆದು ನಾವು ಮುಂಚೆಯಿಂದ ಸ್ವಾಧೀನದಲ್ಲಿ ಇದ್ದೇವು ಎಂದು ನುಡಿಯುತ್ತಾರೆ. ನನ್ನ ತಂದೆಯ ಹೆಸರಿಗೆ ಇರುವ ಆಸ್ತಿಯ ವಿಸ್ತೀರ್ಣಕ್ಕೆ ಮಾತ್ರ ನಾನು ಕಂದಾಯ ಕಟ್ಟಿಕೊಂಡು ಬರುತ್ತಿದ್ದೇನೆ ಎಂದರೆ ಸರಿ. ಪ್ರತಿವಾದ ಪತ್ರದ ಸ್ವತ್ತಿನ ಅಕ್ಕಪಕ್ಕದಲ್ಲಿರುವ ಮಾಲೀಕರ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು, ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

7. ದಾವಾ ಆಸ್ತಿಗಳು ಇರುವ ಜಾಗವು ಸುಮಾರು 70 ರಿಂದ 80 ವರ್ಷ ಹಳೆಯ ಬಡಾವಣೆ ಆಗಿರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಮೂಲತಃ ವಾದಿಯರ ತಾಯಿಯಾದ ಸೂರಮ್ಮ ಕೋ ಪಾಲೆ ಪಾಪಯ್ಯ ಇವರ ಹೆಸರಿಲ್ಲಿ ಖಾತೆ ಇತ್ತು ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ಒಂದು ಹಳೇಯ ಮನೆ ಇದ್ದು ಸೂರಮ್ಮ ಮತ್ತು ಮಕ್ಕಳು ವಾಸಿಸುತ್ತಿದ್ದರು ಎಂದರೆ ಸರಿಯಲ್ಲ. ಈ ದಾವೆಯನ್ನು ದಾಖಲಿಸುವ 6 ವರ್ಷ ಪೂರ್ವದಲ್ಲಿ ಸೂರಮ್ಮ ತೀರಿಕೊಂಡಿದ್ದು, ತದನಂತರ ವಾದಿಗೆ ಹಕ್ಕುದಾರರು, ಸ್ವಾಧೀನಾದಾರರು ಮತ್ತು ಮಾಲೀಕರು ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿದ್ದ ಮನೆಯು ಹಳೆಯ ಮನೆಯಾಗಿದ್ದರಿಂದ ಅದನ್ನು ರಿಪೇರಿ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ವಾದಿಯರ ತಾಯಿಯಾದ ಸೂರಮ್ಮ ಹೆಸರಿನಲ್ಲಿ ಈಗಲೂ ಖಾತೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

8. ದಾವಾ ಆಸ್ತಿಯ ದಕ್ಷಿಣ ದಿಕ್ಕಿನ ಕಡೆಗೆ ನನ್ನ ತಂದೆಗೆ ಸೇರಿದ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ನಮ್ಮ ಆಸ್ತಿಯ ಪಶ್ಚಿಮ ದಿಕ್ಕಿಗೆ ಮಾತ್ರ ಸಾರ್ವಜನಿಕ ರಸ್ತೆ ಇದ್ದು, ಇನ್ನುಳಿದ ಮೂರು ದಿಕ್ಕಿನಲ್ಲಿ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ.

ಸಾಕ್ಷಿಯು ಮುಂದುವರೆದು ಪೂರ್ವ ದಿಕ್ಕಿನಲ್ಲಿ ಕಾಲು ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆಗೆ ಸೇರಿದ ಆಸ್ತಿಯ ಉತ್ತರ ದಿಕ್ಕಿಗೆ ನನಗೆ ಸೇರಿದ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಮಾರ್ಚ್ 2014 ನೇ ಇಸವಿಯಲ್ಲಿ ನಮ್ಮ ಮನೆಯನ್ನು ರಿಪೇರಿ ಮಾಡಿಸಲು ಕೆಲಸ ಹಿಡಿದಾಗ ವಾದಿಗೆ ಸೇರಿದ ಆಸ್ತಿಯಲ್ಲಿ ಒತ್ತುವರಿ ಮಾಡಲು ಪ್ರಯತ್ನಿಸಿದ್ದೆ ಎಂದರೆ ಸರಿಯಲ್ಲ. ಆ ಕಾರಣಕ್ಕೆ ವಾದಿಯರು ಈ ದಾವೆಯನ್ನು ನನ್ನ ವಿರುದ್ಧ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

9. ದಾವಾ ಚಾಲ್ತಿಯಲ್ಲಿದ್ದರು ಕೂಡ ವಾದಿಯರ ಜಾಗದ ಉತ್ತರ ದಿಕ್ಕಿನ ಕಡೆಗೆ ಅಕ್ರಮವಾಗಿ ಎರಡು ಬಾಗಿಲುಗಳನ್ನು ಇಟ್ಟಿರುತ್ತೇನೆ ಎಂದರೆ ಸರಿಯಲ್ಲ. ವಾದಿಯರ ಜಾಗ ಒತ್ತುವರಿ ಮಾಡುವ ರೀತಿಯಲ್ಲಿ ನಾನು 3 ಅಡಿ ಸಿಮೆಂಟ್ ಸಜ್ಜಾ ಇಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ವಾಸದ ಮನೆಯ ಉತ್ತರ ದಿಕ್ಕಿಗೆ ಬಾಗಿಲು ಮತ್ತು ಸಜ್ಜಾ ಇಡುವ ಯಾವುದೇ ಹಕ್ಕು, ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ವಾದಿಯರ ಹಕ್ಕು, ಸ್ವಾಧೀನ ಮತ್ತು ಮಾಲೀಕತ್ವದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಸ್ವಾಧೀನದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಗರಸಭೆಯವರು ಬಂದು ವಾದಿಯರ ಮತ್ತು ನನ್ನ ಆಸ್ತಿಯನ್ನು ಅಳತೆ ಮಾಡಿದರೆ ನನಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.